**ಸಾಕ್ಷಿಯನ್ನು ದಿನಾಂಕಃ 10.7.2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಜೆ ಬಿ ವಕೀಲರಿಂದ**

ನಾನು ಬೆಮೆಲ್ ನ ನೌಕರನಾಗಿರುವುದರಿಂದ 2017 ರಲ್ಲಿ ಆದಾಯ ನಿವೃತ್ತಿ ಹಣ 22 ಲಕ್ಷ ಬಂದಿರುತ್ತದೆ. ಆರೋಪಿ ತಂದೆ ರವಣಯ್ಯ ಪರಿಚಯ ಇರುತ್ತಾನೆ. ಆರೋಪಿ ತಂದೆ ರವಣಯ್ಯ ನನ್ನ ಬಳಿ ಹಣಕಾಸಿನ ವ್ಯವಹಾರ ಮಾಡಿಲ್ಲ. 2017 ರಿಂದ ಇಲ್ಲಿಯವರೆವಿಗೂ ಆರೋಪಿ ತಂದೆ ರವಣಯ್ಯ ನನಗೆ ಯಾವುದೇ ಹಣ ಕೊಟ್ಟಿಲ್ಲ. ದಿಃ24.9.23 ರಂದು ಆರೋಪಿ ತಂದೆ ರವಣಯ್ಯರವರ ಮೇಲೆ ಉರಿಗಾಂ ಪೊಲೀಸ್ ಠಾಣೆಯಲ್ಲಿ ಹಣಕಾಸಿನ ವ್ಯವಹಾರವಾಗಿ ದೂರು ಕೊಟ್ಟಿರುತ್ತೇನೆಂದರೆ ಸರಿ. ಸಾಕ್ಷಿಯು ಉರಿಗಾಂ ಪೊಲೀಸರು ಕೊಟ್ಟ ಎನ್ ಸಿ ಆರ್ ಪ್ರತಿ ಮತ್ತು ದೂರಿನ ಪ್ರತಿಯ ದಾಖಲೆಗಳನ್ನು ನೋಡಿ ಗುರ್ತಿಸಿರುತ್ತಾರೆ. ಸದರಿ ದಾಖಲೆಗಳನ್ನು ನಿಡಿ1 ಮತ್ತು 2 ಎಂದು ಗುರುತಿಸಲಾಯಿತು.

2. ನಾನು ದೂರಿನ ವಿಳಾಸವಾದ ಎಂ ವಿ ನಗರದಲ್ಲಿ ವಾಸವಾಗಿರುತ್ತೇನೆ. ಆರೋಪಿ ಚಾಂಪಿಯನ ರೀಫ್ಸ ನ ಆಂದ್ರ ಲೇನ್ ನಲ್ಲಿ ವಾಸವಾಗಿರುತ್ತಾನೆಂದರೆ ಸರಿ. ನಾನು ಮತ್ತು ಆರೋಪಿ ಅಕ್ಕಪಕ್ಕದ ಮನೆಯವರಾಗಿರುವುದರಿಂದ ಪರಿಚಯ ಇರುತ್ತಾನೆ. ಆರೋಪಿ ವಯಸ್ಸು ಗೊತ್ತಿಲ್ಲ. ನಾನು ವಕೀಲರ ಮೂಲಕ ಕೊಟ್ಟ ಕಾನೂನು ತಿಳುವಳಿಕೆ ಪತ್ರದಲ್ಲಿ ಆರೋಪಿಯ ಬಗ್ಗೆ ಮಾಹಿತಿಯನ್ನು ಕೊಟ್ಟಿರುತ್ತೇನೆ. ನಾನು 1972-73 ನೇ ಸಾಲಿನಲ್ಲಿ ಆರೋಪಿ ಮನೆಯ ಪಕ್ಕದಲ್ಲಿ ವಾಸವಾಗಿರುತ್ತೇನೆ. ಆರೋಪಿ ಮತ್ತು ಆತನ ತಂದೆ ರವಣ್ಣಯ್ಯ ಇಬ್ಬರು ನನ್ನನ್ನು ಹಣ ಕೊಡುವಂತೆ ಬೇಟಿ ಮಾಡಿರುತ್ತಾರೆ. ಆರೋಪಿ ತಂದೆ ರವಣಯ್ಯ ಸೆಂಟ್ ಮೇರಿಸ್ ಶಾಲೆಯಲ್ಲಿ ಕೆಲಸ ಮಾಡುತ್ತಾರೆ. ಆರೋಪಿ ಹೊಸಕೋಟೆಯ ಒರಿಯನ್ ಮಾಲ್ ನಲ್ಲಿ ಕೆಲಸ ಮಾಡುತ್ತಾನೆ.

3. ಆರೋಪಿ ನನ್ನನ್ನು ಹಣ ಕೊಡುವಂತೆ ಡಿಸೆಂಬರ್ 2021 ರಲ್ಲಿ ಕೇಳಿರುತ್ತಾರೆ. ಆದರೆ ದಿನಾಂಕ ನೆನಪಿಲ್ಲ. ಆರೋಪಿ ನನ್ನನ್ನು ಹಣ ಕೇಳಿದಾಗ ನನ್ನ ಖಾತೆಯಲ್ಲಿ 12 ಲಕ್ಷ ಇರುತ್ತದೆ. ಆರೋಪಿಗೆ ಹಣ ಕೊಟ್ಟೆ ಎಂದು ಹೇಳುವ ರೂ.8 ಲಕ್ಷ ಐವತ್ತು ಸಾವಿರ ಯಾವ ದಿನಾಂಕ, ತಿಂಗಳು ಮತ್ತು ವರ್ಷ ಬ್ಯಾಂಕಿನಿಂದ ನಗದಾಗಿ ತಂದಿರುತ್ತೇನೆಂದರೆ ನೆನಪಿಲ್ಲ. ನಾನು ನನ್ನ ಖಾತೆಯಿಂದ ರೂ.8 ಲಕ್ಷ ಐವತ್ತು ಸಾವಿರ ಗಳನ್ನು ಬ್ಯಾಂಕಿನಿಂದ ಡ್ರಾ ಮಾಡಿಕೊಂಡು ಯಾವಾಗ ಆರೋಪಿಗೆ ಕೊಟ್ಟಿರುತ್ತೇನೆಂದು ನೋಟೀಸ್ ನಲ್ಲಿ ಮತ್ತು ದೂರಿನಲ್ಲಿ

ಹೇಳಿರುವುದಿಲ್ಲ. ನಾನು ಆರೋಪಿಗೆ ರೂ.8 ಲಕ್ಷ ಐವತ್ತು ಸಾವಿರಗಳನ್ನು 3 ಬಾರಿ ಕೊಟ್ಟಿರುತ್ತೇನೆಂದು ಹೇಳುವ ದಿನಾಂಕ, ತಿಂಗಳು, ವರ್ಷ ನೆನಪಿಲ್ಲ. ನಾನು ಕಾನೂನು ತಿಳುವಳಿಕೆ ಪತ್ರದಲ್ಲಿ ಬ್ಯಾಂಕಿನಿಂದ ರೂ.8 ಲಕ್ಷ ಐವತ್ತು ಸಾವಿರಗಳನ್ನು ಡ್ರಾ ಮಾಡಿ ಆರೋಪಿಗೆ ಕೊಟ್ಟಿರುವ ಬಗ್ಗೆ ಹೇಳಿರುತ್ತೀರಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ಚೆಕ್ ಮೂಲಕ ಹಣ ಪಾವತಿಸಿಲ್ಲ, ಆದರೆ ನಗದಾಗಿ ಹಣ ಕೊಟ್ಟಿರುತ್ತೇನೆ. ನಾನು ಆರೋಪಿಗೆ ಹಣವನ್ನು ಕೊಡುವಾಗ ನಾನು ಮತ್ತು ನನ್ನ ಮಗ ಇರುತ್ತೇವೆ. ನಾನು ಆರೋಪಿಗೆ ಹಣವನ್ನು ಮನೆಯಲ್ಲಿ ಕೊಡುವ ದಿನಾಂಕ ಮತ್ತು ಆರೋಪಿ ನನ್ನ ಮನೆಗೆ ಬಂದು ಹಣ ಪಡೆದುಕೊಂಡು ಹೋದ ದಿನಾಂಕ ನೆನಪಿಲ್ಲ.

4. ಆರೋಪಿಗೆ ಹಣ ಕೊಟ್ಟಿರುತ್ತೇನೆಂದು ಹೇಳುವುದನ್ನು ವಾಪಸ್ಸು ಪಡೆಯಲು ಆರೋಪಿಗೆ ಸಾಮರ್ಥ್ಯ ಇರುವ ಬಗ್ಗೆ ವೇತನ ಪಟ್ಟಿ ರೂ.48 ಸಾವಿರ ಇರುವುದನ್ನು ಪಡೆದಿರುತ್ತೇನೆ. ನಾನು ಹೇಳುವಂತೆ ಆರೋಪಿಗೆ ಹಣ ವಾಪಸ್ಸು ಕೊಡುವ ಸಾಮರ್ಥ್ಯ ಇರುವ ಬಗ್ಗೆ ಮತ್ತು ವೇತನ ಪಟ್ಟಿ ಬಗ್ಗೆ ನಾನು ಕಾನೂನು ತಿಳುವಳಿಕೆ ಪತ್ರದಲ್ಲಿ ಹಾಗೂ ದೂರಿನಲ್ಲಿ ಹೇಳಿರುವುದಿಲ್ಲ. ನಾನು ಮೊದಲನೇ ಬಾರಿಗೆ ಆರೋಪಿಗೆ ಕೊಟ್ಟ ಹಣ ರೂ.2 ಲಕ್ಷ ಐವತ್ತು ಸಾವಿರ ಕೊಡುವಾಗ ಬಾಂಡ್ ಪೇಪರ್ ಮತ್ತು ಆನ್ ಡಿಮ್ಯಾಂಡ್ ಪ್ರಾಮಿಸರಿ ನೋಟ್ ಪಡೆದಿರುತ್ತೇನೆ. ನಾನು ಎರಡನೇ ಬಾರಿಗೆ ಆರೋಪಿಗೆ ಕೊಟ್ಟ ಹಣ ರೂ.6 ಲಕ್ಷ ಕೊಡುವಾಗ ಚೆಕ್ ಪಡೆದಿರುತ್ತೇನೆ. ಆರೋಪಿಯು 6 ಲಕ್ಷಕ್ಕೆ ಚೆಕ್ ಅನ್ನು ಬರೆದುಕೊಟ್ಟಿರುತ್ತಾನಾ ಎಂದರೆ ಸಾಕ್ಷಿಯು ರೂ.8 ಲಕ್ಷ ಐವತ್ತು ಸಾವಿರ ಕ್ಕೆ ಬರೆದುಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಅನುಮತಿಸಿ ನೀಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).

ಓದಿ ಹೇಳಿ ಕೇಳಿ ಸರಿ ಇದೆ

(ವಿನೋದ್ ಕುಮಾರ್ ಎಂ )

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.